ವ್ಯಾವಹಾರಿಕ  ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ  ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ. 296/2018,

ಚಾಸಾ- 1,  ಪ್ರಾಸಾ -1

| | |
|---|---|
| ಹೆಸರು | ಕಿಶೋರ್ ಕುಮಾರ್ |
| ತಂದೆಯ ಹೆಸರು | ಅಣ್ಣಿ ನಾಯ್ಕ್ |
| ವಯಸ್ಸು | 42 ವರ್ಷ |
| ಕೆಲಸ | ಖಾಸಗಿ ಕೆಲಸ |
| ವಾಸ | ಕಾಯರ್ ಪುಂಡು , ಪುತ್ತಿಗೆ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 30-12-2024 |

ಮುಖ್ಯ ವಿಚಾರಣೆಃ  ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-2 ನನ್ನ ತಾಯಿ . ಚಾಸಾ-3 ನನ್ನ ತಂಗಿ . ಆರೋಪಿ ಗೊತ್ತು . ದಿಃ 22-10-2017 ರಂದು ಬೆಳಿಗ್ಗೆ 9-15 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯ ಹತ್ತಿರ ಇರುವ ರಸ್ತೆಯ ಬಳಿ ನನ್ನ ಸ್ನೇಹಿತರೊಂದಿಗೆ ಸ್ವಚ್ಛತಾ  ಕಾರ್ಯಕ್ರಮಕ್ಕೆ ಹೋಗಿರುತ್ತೇನೆ . ನಂತರ ನಾನು ಮಧ್ಯಾಹ್ನ 1-30 ಗಂಟೆ ಹೊತ್ತಿಗೆ ಮನೆಗೆ ಬರುವಾಗ , ನಾನು ಮನೆಗೆ ಬೀಗ ಹಾಕಿ ಹೊಗಿದ್ದು , ಮನೆಗೆ ಬಂದು ನೋಡಿದಾಗ , ಮನೆಯ ಬೀಗ ಮುರಿದು ಹಾಕಿರುವುದು ಕಂಡು ಬಂದಿರುತ್ತದೆ . ಮುಂದಿನ ಬಾಗಿಲನ್ನು ಒಳಗಿನಿಂದ ಚಿಲಕ ಹಾಕಿರುತ್ತಾರೆ . ಮನೆಯ ಹಿಂದಿನ ಬಾಗಲಿನಿಂದ ಒಳಗೆ ಹೋಗಿ ನೋಡಿದಾಗ ,   ಎರಡೂ ರೂಂಗಳಲ್ಲಿ ಇದ್ದ ಕಪಾಟುಗಳನ್ನು ತೆಗೆದು ಅದರಲ್ಲಿ ಇದ್ದ ಬಟ್ಟೆಗಳು ಹಾಗೂ ಫ್ಯಾನ್ಸಿ ವಸ್ತುಗಳನ್ನು ಒಡೆದು ಹಾಕಿ ಚೆಲ್ಲಾ ಪಿಲ್ಲಿ ಮಾಡಿರುವುದು ಕಂಡು ಬಂದಿರುತ್ತದೆ . ಬಂಗಾರದ ಒಂದು  ನೆಕಕ್ ಲೇಸ್ ಚೈನ್ ಹಾಗೂ ಬಂಗಾದರ ಎರಡು

ಬಳೆಗಳು ಕಳ್ಳತನವಾಗಿದ್ದು ಕಂಡು ಬಂದಿರುತ್ತದೆ .  ನಂತರ ನಾನು ನನ್ನ ತಂಗಿಗೆ ಕರೆ ಮಾಡಿರುತ್ತೇನೆ. ನಂತರ ನನ್ನ ತಾಯಿಯನ್ನು ಕೂಡ ಮನೆಗೆ ಕರೆದಿರುತ್ತೇನೆ. ತಂಗಿಯು ಮೂಡಬಿದ್ರೆಯಲ್ಲಿಯೇ ಕೆಲಸ ಮಾಡಿಕೊಂಡಿದ್ದು , ಅವರು ಕರೆ ಮಾಡಿದ ಕೂಡಲೆ ಬಂದಿರುತ್ತಾರೆ. ಸ್ವಲ್ಪ ಸಮಯದ ನಂತರ ನನ್ನ ತಾಯಿ ಮಣಿಪಾಲದಿಂದ ಬಂದಿರುತ್ತಾರೆ .

2. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದುರನ್ನು ನೀಡಿಗಿರುತ್ತೇನೆ . ಸದರಿ ದೂರನ್ನು ನೋಡುತ್ತಿದ್ದು , ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು .  ನಂತರ ಪೊಲೀಸರು ಸಂಜೆ 5-30 ಗಂಟೆ ಸುಮಾರಿಗೆ ಮನೆಗೆ ಬಂದಿರುತ್ತಾರೆ . ಪೊಲೀಸರಿಗೆ ನಾನೇ ಸ್ಥಳವನ್ನು ತೋರಿಸಿಕೊಟ್ಟಿರುತ್ತೇನೆ .  ಸದರಿ ಸಮಯದಲ್ಲಿ ಚಾಸಾ-5 ಮತ್ತು ಚಾಸಾ-6 ರವರು ಸ್ಥಳದಲ್ಲಿ ಹಾಜರಿರುತ್ತಾರೆ . ಸದರಿ ಸಮಯದಲ್ಲಿ ಪೊಲೀಸರು ತುಂಡಾದ ಬೀಗವನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ . ಪೊಲೀಸರು 5-30 ಗಂಟೆಯಿಂದ 6-30 ಗಂಟೆಯವರೆಗೆ ಮಹಜರನ್ನು ಜರುಗಿಸಿರುತ್ತಾರೆ .  ಸದರಿ ಮಹಜರನ್ನು ನೋಡುತ್ತಿದ್ದು , ಅದನ್ನು ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಮಹಜರಿನ ಸಮಯದಲ್ಲಿ ಒಂದು ಬೀಗವನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ . ಸದರಿ ಬೀಗವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಮು.ಮಾ-1 ಎಂದು ಗುರುತಿಸಲಾಯಿತು .

3. ನಂತರ ದಿಃ 19-11-2017 ರಂದು  ಪೊಲೀಸರು  ದೂರವಾಣಿ ಕರೆ ಮಾಡಿ ಕಳವುವಾದ ಸ್ವತ್ತುಗಳು ಹಾಗೂ ಆರೋಪಿಯನ್ನು ದಸ್ತಗಿರಿ ಮಾಡಿರುವ ಬಗ್ಗೆ ಠಾಣೆಗೆ ನನ್ನನ್ನು ಕರೆದಿರುತ್ತಾರೆ . ಆ ಸಮಯದಲ್ಲಿ ನಾನು ಹಾಗೂ ಚಾಸಾ-2 ರವರು ಠಾಣೆಗೆ ಹೋಗಿ ಆಭರಣ ಹಾಗೂ ಆರೋಪಿಯನ್ನು ನೋಡಿ ಗುರುತಿಸಿರುತ್ತೇವೆ .

ಸಾಕ್ಷಿ ಕಳುವಾದ ಆಭರಣಗಳು ಇರುವ ಫೋಟೋವನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು . ನಂತರ ನಾನು ಬಂಗಾರವನ್ನು ನಮ್ಮ ಸ್ವಾಧೀನಕ್ಕೆ ಪಡೆದುಕೊಂಡಿರುತ್ತೇನೆ . ಆ ಸಮಯದಲ್ಲಿ ನಾನು ಪೊಲೀಸರು ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ . ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆನು . ಈ ದಿನ ಆರೋಪಿ ಗೈರುಹಾಜರಿರುತ್ತಾನೆ .

ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ಮುಂಬದಿಯ ಬಾಗಿಲಿನ ಬೀಗ ಒಡೆದಿದ್ದು , ಆ ಬೀಗ ಬಾಗಿಲನ ಮುಂಬದಿಯಲ್ಲಿ ಬಿದ್ದಿತ್ತು . ಆ ಬೀಗ ಕೊಕ್ಕೆ ಒಡೆದು ಹೋಗಿತ್ತೋ ಇಲ್ಲವೋ ಎಂಬುದನ್ನು ನಾನು ನೋಡಿಲ್ಲ . ಪೊಲೀಸರು ಸ್ಥಳಕ್ಕೆ ಬಂದಾಗ ಬಾಗಿಲಿನ ಮುಂಬದಿಯಲ್ಲಿ ಬಿದ್ದಿದ್ದ ಬೀಗವನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ . ಈ ವಿಚಾರವನ್ನು ಪೊಲೀಸರು ಮಹಜರಿನಲ್ಲಿ ನಮೂದು ಮಾಡಿದ್ದರೆಯೋ ಇಲ್ಲವೋ ಎಂಬುದು ನನಗೆ ನೆನಪಿಲ್ಲ . ನ್ಯಾಯಾಲಯದ ಮುಂದೆ ಇರುವ ಮು.ಮಾ-1 ನ್ನು ನೋಡಿ ಸಾಕ್ಷಿಯು ಸದರಿ ಬೀಗ ಒಡೆದು ಹೋಗಿರುವುದಿಲ್ಲ ಮತ್ತು ಅದರ ಕೊಕ್ಕೆ ತೆರೆದ ಸ್ಥಿತಿಯಲ್ಲಿ ಇಲ್ಲ ಎಂದು ಹೇಳಿರುತ್ತಾರೆ .

2. ಆರೋಪಿ ಮತ್ತು ಆಭರಣಗಳು ಸಿಕ್ಕಿವೆ ಎಂದು ಪೊಲೀಸರು ನನಗೆ ಮಧ್ಯಾಹ್ನದ ಸಮಯದಲ್ಲಿ ಕರೆ ಮಾಡಿರುತ್ತಾರೆ , ಆದರೆ ನಿರ್ದಿಷ್ಟವಾದ ಸಮಯ ಗೊತ್ತಿರುವುದಿಲ್ಲ . ಆರೋಪಿಯನ್ನೇ ಕಳ್ಳ ಎಂದು ಪೊಲೀಸರು ನನಗೆ ತೋರಿಸಿದ ಮೇರೆಗೆ ಆರೋಪಿಯೇ ಕಳ್ಳ ಎಂದು ಗೊತ್ತಾಗಿರುತ್ತದೆ . ಸ್ಥಳ ಪೊಲೀಸರು ಬಂದ ದಿನದಂದೇ ನನ್ನನ್ನು ಠಾಣೆಗೆ ಕರೆದಿರುವುದಿಲ್ಲ .

ಆಭರಣಗಳು ಸಿಕ್ಕಿದೆ ಎಂದು ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆದ್ದದ್ದೆ ಇಲ್ಲ ಎಂದರೆ ಸರಿಯಲ್ಲ . ಆ ಪ್ರಕಾರ ನಾನು ಠಾಣೇಗೆ ಹೋಗಿಯೇ  ಇಲ್ಲ ಎಂದರೆ ಸರಿಯಲ್ಲ . ಪೊಲೀಸರು ನನಗೆ ಆರೋಪಿ ಹಾಗೂ ಆಭರಣಗಳನ್ನು ತೋರಿಸಿಯೇ ಇಲ್ಲ ಎಂದರೆ ಸರಿಯಲ್ಲ . ಪೊಲೀಸರು ನಮ್ಮ ಮನೆಗೆ ಬಂದಿರುವುದಿಲ್ಲ ಮತ್ತು ಯಾವುದೇ ಮಹಜರನ್ನು ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಮಹಜರಿಗೆ ನಾನು ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ